# ಪುಟ್ಟ ಬಂಗಾರಿಗೂ ಬೇಕು ಬಂಗಾರದೊಡವೆ!



ಪುಟ್ಟ ಮಕ್ಕಳು ಜರಿಲಂಗ ದಾವಣಿ ತೊಟ್ಟು ಸಂಭ್ರಮಿಸುವಾಗ ಅದಕ್ಕೊಪ್ಪುವ ಬಂಗಾರದ ಒಡವೆ ಇದ್ದರೇ ಸೊಗಸು. ಹೆಚ್ಚು ಚಿನ್ನವಿರುವ ಭಾರದ ಒಡವೆ ಮಕ್ಕಳಿಗೆ ಸೂಕ್ತವಲ್ಲ. ಹೊಳಪುಳ್ಳ ಒಡವೆಯನ್ನು ಮಕ್ಕಳು ಇಷ್ಟಪಡುತ್ತಾರೆ. ಮಕ್ಕಳಿಗಾಗಿಯೇ ಸುಂದರ ಒಡವೆಗಳ ಸಂಗ್ರಹ ಇದೀಗ ಮಾರುಕಟ್ಟೆಗೆ ಬಂದಿದೆ. ಜನಪ್ರಿಯತೆಯನ್ನೂ ಗಿಟ್ಟಿಸಿಕೊಂಡಿದೆ.

**■ ಕೃಷ್ಣವೇಣಿ ಪ್ರಸಾದ್ ಮುಳಿಯ**

ಚಿತ್ರಗಳು: ಮುಳಿಯ ಕೇಶವಭಟ್ ಅಂಡ್ ಸನ್ಸ್

ಫ್ಯಾಷನ್ ಬರೀ ಯುವತಿಯರಿಗೆ, ಮಹಿಳೆಯರಿಗೆ ಮಾತ್ರ ಮೆಚ್ಚು ಎಂದು ನೀವು ಎಣಿಸಿದ್ದರೆ ಅದು ನಿಮ್ಮ ತಪ್ಪುಗ್ರಹಿಕೆ. ಇಂದು ದೊಡ್ಡವರಿಗಿಂತಲೂ ಮಕ್ಕಳೇ ಫ್ಯಾಷನ್ ಬಗ್ಗೆ ಹೆಚ್ಚು ಆಸಕ್ತರಾಗಿದ್ದಾರೆ. ಬಟ್ಟೆ, ಒಡವೆ, ಕ್ಲಿಪ್, ಮೇಕಪ್... ಅಷ್ಟೇ ಏಕೆ ಒಂದು ಕರ್ಚೀಫ್ ಕೂಡ ಸ್ಟೈಲಿಷ್ ಆಗಿರಬೇಕು ಎಂದು ಬಯಸುತ್ತಾರೆ ಈಗಿನ ಮಕ್ಕಳು.

ಒಡವೆ ಕೂಡ ಇದರಿಂದ ಹೊರತಾಗಿಲ್ಲ. ಮಕ್ಕಳಿಗಾಗಿಯೇ ಇದೀಗ ಫ್ಯಾಷನಬಲ್ ಚಿನ್ನದ ಒಡವೆಗಳು ಮಾರುಕಟ್ಟೆಗೆ ಬಂದಿದ್ದು, ಫ್ಯಾಷನ್‌ಪ್ರಿಯ ಮಕ್ಕಳ ಆಸೆ, ಮೋಹ ಎಲ್ಲವನ್ನೂ ಈಡೇರಿಸುತ್ತಿದೆ.

ಮುಗ್ಧ ಮನಸ್ಸಿನ ಪುಟ್ಟ ಬಂಗಾರಿಗೂ ಬಣ್ಣ ಬಣ್ಣದ ಬಟ್ಟೆಯೊಂದಿಗೆ ಒಪ್ಪುವ ಬಂಗಾರದ ಒಡವೆ ಬೇಕು. ಸಾಧಾರಣ ಮಕ್ಕಳು ಹೇಗೆಂದರೆ ತಮ್ಮ ಒಡವೆ ಮತ್ತು ಬಟ್ಟೆಯನ್ನು ತಾವೇ ನೋಡಿಕೊಂಡು, ಸ್ಪರ್ಶಿಸಿಕೊಂಡು ಆನಂದಿಸುತ್ತಾರೆ. ಮಕ್ಕಳಿಗೂ ಎದ್ದು ಕಾಣುವ ವಿನ್ಯಾಸ ಇರಬೇಕು. ಆದರೆ ಹಗುರವಾಗಿರಬೇಕು. ಅವರ ಕೋಮಲವಾದ ತ್ವಚೆಗೆ ಒಪ್ಪುವಂತಿರಬೇಕು.

ಮಕ್ಕಳ ಆಭರಣದಲ್ಲಿ ಇಂದು ವೆರೈಟಿ ವಿನ್ಯಾಸ ಇದೆ. ನಾವು ಆರಿಸುವಾಗ ಜಾಗ್ರತವಾಗಿರಬೇಕು. ಅಲಂಕಾರಕ್ಕೆ ಯೋಗ್ಯವಾಗಿದ್ದರೂ ಡೆಲಿಕೇಟೆಡ್ ಆಭರಣವಾಗಿರಬಾರದು. ಆಭರಣದಲ್ಲಿ ಬೆಸುಗೆ ಮಾಡಿದ ಜಾಗ ಬಹಳ ಸದೃಢವಾಗಿರಬೇಕು. ಮುತ್ತು, ಹರಳುಗಳು ಇದ್ದು ಹೊಳಪಿನಿಂದ ಕೂಡಿರಬೇಕು. ಮಿಂಚುವ ಆಭರಣವನ್ನು ಮಕ್ಕಳು ಇಷ್ಟಪಟ್ಟು ತೊಟ್ಟುಕೊಳ್ಳುತ್ತಾರೆ.

## ಕರಿಮಣಿಗಳಿಗೆ ಪ್ರಾಶಸ್ತ್ಯ

ಕಪ್ಪು ಮಣಿ ದೃಷ್ಟಿ ಬೀಳದಂತೆ ನಮ್ಮನ್ನು ಕಾಪಾಡುತ್ತದೆ ಅನ್ನೋ ನಂಬಿಕೆ ಹಿರಿಯರಿಂದಲೇ ಚಾಲ್ತಿಯಲ್ಲಿದೆ. ಕೆಟ್ಟ ಕಿರಣಗಳನ್ನು ತಡೆಯುವ ಶಕ್ತಿ ಕಪ್ಪು ಹರಳಿನಲ್ಲಿದೆ. ನಮ್ಮನ್ನು ಸಕಾರಾತ್ಮಕವಾಗಿ ಪ್ರಚೋದಿಸುವ ಶಕ್ತಿ ಇದರಲ್ಲಿದೆ. ಮಗುವಿಗೆ ಆರೋಗ್ಯಕ್ಕೆ ಪೂರಕವಾಗಿದ್ದು ಸುಂದರವಾಗಿ ಕಾಣುವಂತೆ ಮಾಡುವ ಹಲವಾರು ಆಭರಣವಿದೆ. ನೂಲಿನಲ್ಲಿ ಪೋಣಿಸಿದ ಕರಿಮಣಿ ಚೋಕರ್, ಎರಡು ಎಳೆ ಸರ, ಕಪ್ಪು ಬಣ್ಣ ಕ್ಯುಬಿಕ್ ಜರ್ಕೋನಿಯಾ ಸೆಟ್ಟಿಂಗ್ ಮಾಡಿದ ನೆಕ್ಲೇಸ್, ಕಿವಿಯೋಲೆಗಳಂತೂ ಇಂದು ಹೇರಳವಾಗಿ ಲಭ್ಯವಿದೆ. ನಿತ್ಯ ಬಳಕೆಗೆ ಒಂದು ಕಪ್ಪು ಹರಳಿನ ಓಲೆ ಸುಂದರವಾಗಿ ಕಿವಿಗೊಪ್ಪುವಂತೆ ಇರುತ್ತದೆ.

## ಅಡ್ಜಸ್ಟ್‌ಮೆಂಟ್ ಆಭರಣ

ಸಾಧಾರಣವಾಗಿ ಮಕ್ಕಳಿಗೆ ಚಿಕ್ಕ ಆಭರಣ ಸಾಕು. ಆದರೆ ನೆಕ್ಲೇಸ್ ಸಾಮಾನ್ಯವಾಗಿ 16 ಇಂಚು, 18 ಇಂಚು ಬೇಕು. ಮಕ್ಕಳು ಬೇಗ ಬೆಳೆಯುವುದರಿಂದ ಎರಡೂ ಬದಿಯಲ್ಲಿ ರಿಂಗ್‌ಗಳು ಸ್ವಲ್ಪ ಮಟ್ಟಿಗೆ ಜಾಸ್ತಿ ಇದ್ದು ವಿನ್ಯಾಸ ನಡುಭಾಗದಲ್ಲಿ ಸರಿಯಾದ ಜಾಗದಲ್ಲಿರುವಂತೆ ನೋಡಿ ಖರೀದಿಸಬೇಕು. ಕಿವಿಯೋಲೆ ಮೀಡಿಯಂ ಸೈಜ್ ಆದರೆ ತಾರುಣ್ಯ ಬರುವವರೆಗೂ ಧರಿಸಬಹುದು. ಬಳೆ, ಖಡ ಅಥವಾ ಅಡ್ಜಸ್ಟ್‌ಮೆಂಟ್ ಇರುವ ಬಳೆಯನ್ನು ಖರೀದಿಸಿ. ಪುಟ್ಟ ಕೈಗಳಿಗೆ ಬಳೆ ಹುಕ್ ಇರುವುದು, ಖರೀದಿಸಿದಲ್ಲಿ ಹುಕ್ ತಾಗದೆ ಇರುವಂತೆ ಗಮನಹರಿಸಿ ಕಣ್ಣು, ಮುಖಕ್ಕೆ ಗಾಯ ಆಗದಂತೆ ಫಿನಿಶಿಂಗ್ ಇರುವ ಬಳೆ ಖರೀದಿಸಿ.

## ಹಗುರದ ಆಭರಣ

ಸಭೆ, ಸಮಾರಂಭಗಳಿಗೆ ಮಕ್ಕಳಿಗೆ ಆಭರಣ ತೊಡಬೇಕು, ಸಂಭ್ರಮಿಸಬೇಕು ಅನ್ನೋ ಆಸೆ ಇದ್ದೇ ಇರುತ್ತದೆ. ತಾಯಿಯ ಆಭರಣ ನೋಡುವಾಗ ಮಕ್ಕಳಿಗೆ ಸಹಜವಾಗಿ ಸಂತಸವಾಗುತ್ತದೆ. ಮಕ್ಕಳ ಕಿವಿ ತುಂಬ ತೆಳ್ಳಗೆ ಇದ್ದು ಭಾರವನ್ನು

